ಓ.ಎಸ್. ನಂ. 179/2012

ಡಿ.ಡಬ್ಲ್ಯೂ: 01 (ನಿಂಗಮ್ಮ)

ದಿನಾಂಕಃ 08.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ – ಶ್ರೀ ಕೆ ಜೆ ಜಿ ವಕೀಲರಿಂದ.

ನನ್ನ ಗಂಡ ಪಾಲಯ್ಯನಿಗೆ ಒಬ್ಬನೇ ಅಣ್ಣ ಇದ್ದು, ಅವರ ತಂದೆಗೆ ಅವರಿಬ್ಬರೇ ಒಡಹುಟ್ಟಿದವರಾಗಿರುತ್ತಾರೆ. ನಮ್ಮ ಮಾವನ ಹೆಸರು ಬೋರಯ್ಯ. ಬೋರಯ್ಯನಿಗೆ ಪಾಲಯ್ಯ, ಓಬಯ್ಯ ಇಬ್ಬರು ಸಹೋದರರಿದ್ದರು. ಇವರು ಗೆದ್ದಲಗಟ್ಟಿ ಮಾರಯ್ಯನ ಮಕ್ಕಳು ಎಂದರೆ ಹೌದು. ಮಾರಯ್ಯನ ದೊಡ್ಡ ಮಗನ ಹೆಸರು ಪಾಲಯ್ಯ. ನಮ್ಮ ಮಾವ ಬೋರಯ್ಯ ಕಡೆಯ ಮಗ ಆಗಿರುತ್ತಾನೆ. ನನ್ನ ಮಾವನ ಅಣ್ಣ ಪಾಲಯ್ಯನನ್ನು ನಾನು ನೋಡಿರುವುದಿಲ್ಲ. ಪಾಲಯ್ಯನ ಹೆಂಡತಿಯ ಹೆಸರು ಪಾಲಮ್ಮ. ಪಾಲಮ್ಮಳಿಗೆ ಶಾಂತಮ್ಮ, ರಾಜಮ್ಮ ಎಂಬ ಮಕ್ಕಳಿದ್ದರು. ಶಾಂತಮ್ಮ ನನ್ನ ತಾಯಿ, ನನ್ನ ತಂದೆಯ ಹೆಸರು ಮಡಕಲಕಟ್ಟಿ ಪಾಲಯ್ಯ. ನನ್ನ ದೊಡ್ಡಮ್ಮ ರಾಜಮ್ಮಳನ್ನು ಕರಡಿಹಳ್ಳಿ ಬೋರಯ್ಯನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ತಂದೆ ತಾಯಿಗೆ 4 ಜನ ಮಕ್ಕಳು ಎಂದರೆ ಹೌದು. ಅವರುಗಳು ನಾನು, ಪಾರ್ವತಮ್ಮ, ಪಾಪಯ್ಯ ಮತ್ತು ಪಾಲಯ್ಯ ಇರುತ್ತಾರೆ.

ಪಾಲಯ್ಯನ ಹೆಂಡತಿಯ ಹೆಸರು ನಿಂಗಮ್ಮ. ನನ್ನ ಮಾವನ 2 ನೇ ತಮ್ಮನಾದ ಓಬಯ್ಯನಿಗೆ ಪಾಲಯ್ಯ ಮತ್ತು ಓಬಯ್ಯ ಎಂಬ ಇಬ್ಬರು ಮಕ್ಕಳಿದ್ದು, ಅವರ ಪೈಕಿ ಪಾಲಯ್ಯನಿಗೆ ಕೃಷ್ಣಪ್ಪ ಎಂಬ ಮಗ ಇದ್ದು, ಓಬಯ್ಯನಿಗೆ ಬೊಮ್ಮಕ್ಕ ಎಂಬ ಹೆಂಡತಿ ಇದ್ದಾಳೆ. ಓಬಯ್ಯ ಮತ್ತು ಬೊಮ್ಮಕ್ಕಳಿಗೆ ಓಬಯ್ಯ, ರಾಜಪ್ಪ, ಸೋಮಶೇಖರ, ಬೋರಯ್ಯ ಎಂಬ 4 ಮಕ್ಕಳು ಇದ್ದಾರೆ ಎಂದರೆ ಹೌದು. ನನ್ನ ಮಾವ ಬೋರಯ್ಯ ಮತ್ತು ಆತನ ಅಣ್ಣಂದಿರಾದ ಪಾಲಯ್ಯ, ಓಬಯ್ಯ ಭಾಗ ಆಗಿರುತ್ತಾರೆ.

ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 26.01 ಎಕರೆ ಆಗಿತ್ತು ಎಂದರೆ ಹೌದು. ಅದು ನನ್ನ ತಾತನಾದ ಮಾರಪ್ಪನ ಆಸ್ತಿಯಾಗಿತ್ತು ಎಂದರೆ ಹೌದು. ಮೊದಲನೇಯ ಪಟ್ಟಿಯನ್ನು ಪಾಲಯ್ಯ, ಮಧ್ಯದ ಪಟ್ಟಿಯನ್ನು ಓಬಯ್ಯ, ಕೊನೆಯ ಪಟ್ಟಿಯನ್ನು ಬೋರಯ್ಯ ತೆಗೆದುಕೊಂಡಿರುತ್ತಾರೆ. ಪಾಲಯ್ಯನ ಜಮೀನಿನ ಪಕ್ಕದಲ್ಲಿ ಮುಕ್ಕಣ್ಣನ ಜಮೀನು ಇದೆ. ಮುಕ್ಕಣ್ಣನ ಜಮೀನಿನ ಪಕ್ಕದಲ್ಲಿರುವ ಜಮೀನು ನನ್ನ ಮಾವ ಬೋರಯ್ಯನಿಗೆ ಬಂದ ಭಾಗದ ಆಸ್ತಿ. ಈರಪ್ಪನ ಜಮೀನು ಮಾರಪ್ಪನ ಜಮೀನಿಗೆ ಹೊಂದಿಕೊಂಡಂತೆ ಇದೆ, ಅದು ಪಾಲಯ್ಯ, ಓಬಯ್ಯ ಹಾಗೂ ಬೋರಯ್ಯನಿಗೆ ಬಂದ ಜಮೀನಿಗೆ ಅಂಟಿಕೊಂಡಿದೆ. ಮಾರಪ್ಪನ 2 ಜನ ಮಕ್ಕಳಾದ ಪಾಲಯ್ಯ ಮತ್ತು ಓಬಯ್ಯ ತಲಾ 8.66 ಎಕರೆ ಹಂಚಿಕೊಂಡಿದ್ದು, ಬೋರಯ್ಯನಿಗೆ 8.69 ಎಕರೆ ಬಂದಿರುತ್ತದೆ ಎಂದರೆ ಹೌದು.

ನನ್ನ ಮಾವನ ಅಣ್ಣನಾದ ಓಬಯ್ಯನ ಮಕ್ಕಳು ಕೂಡಿ ಇದ್ದಾರೋ ಬೇರೆ ಬೇರೆ ಇದ್ದಾರೋ ನನಗೆ ಗೊತ್ತಿಲ್ಲ. ನನ್ನ ಮಾವನ ಅಣ್ಣನಾದ ಓಬಯ್ಯನ ಮಗ ಓಬಯ್ಯ ದಿಃ 30.06.1966 ರಂದು ತನ್ನ ತಂದೆಗೆ ಬಂದ

8.66 ಎಕರೆ ಪೈಕಿ 5.79 ಎಕರೆಯನ್ನು ಕೃಷ್ಣಪ್ಪನ ತಂದೆ ಪಾಲಯ್ಯನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೃಷ್ಣಪ್ಪ ಅವರು ದಿಃ 30.04.2001 ರಲ್ಲಿ ನನ್ನ ಮಾವನ ಅಣ್ಣನಾದ ಓಬಯ್ಯನಿಗೆ ಇದೆ ಸರ್ವೆ ನಂಬರಿನಲ್ಲಿ ಬಂದ 8.66 ಎಕರೆಯನ್ನು ತಿಪ್ಪೇಸ್ವಾಮಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದೆಲ್ಲ ನನಗೆ ಗೊತ್ತಿಲ್ಲ. ನನ್ನ ಮಾವನ ಅಣ್ಣನಾದ ಓಬಯ್ಯನ ಮಗ ಬೋರಯ್ಯ ಖರೀದಿದಾರರ ವಿರುದ್ಧ ಮಾಲೀಕತ್ವ ಕೋರಿ ಓ ಎಸ್ 140/1999 ರಂತೆ ದಾವೆ ಸಲ್ಲಿಸಿದ್ದು, ಅದು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಈಗ ಮದ್ಯದ ಆಸ್ತಿಯಲ್ಲಿ ಓಬಯ್ಯನ ವಂಶಸ್ಥರಿಂದ ಖರೀದಿ ಮಾಡಿರುವ ತಿಪ್ಪೇಸ್ವಾಮಿ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಪಾಲಮ್ಮ, ನನ್ನ ತಾಯಿ ಶಾಂತಮ್ಮ, ನನ್ನ ದೊಡ್ಡಮ್ಮ ರಾಜಮ್ಮ ಅವರು ನನ್ನ ಗಂಡನಾದ ಪಾಲಯ್ಯ ಮತ್ತು ಓಬಯ್ಯರವರಿಗೆ ದಾನಪತ್ರವನ್ನು ದಿಃ 04.04.1963 ರಂದು ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಅದಕ್ಕೆ ಮಡಕಲಕಟ್ಟೆ ಶಾಂತವ್ವ, ಕರಡಿಹಳ್ಳಿ ರಾಜವ್ವ, ಪಾಲಯ್ಯನ ಹೆಂಡತಿ ಪಾಲಮ್ಮ ಅದಕ್ಕೆ ಸಹಿ ಹಾಕಿರುತ್ತಾರೆ ಎಂದರೆ ಸುಳ್ಳು. ಅದರಂತೆ ನನ್ನ ಗಂಡ ಹಾಗೂ ಆತನ ಅಣ್ಣನ ಹೆಸರಿಗೆ ದಾನಪತ್ರ ಬರೆದುಕೊಟ್ಟ 8.66 ಎಕರೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸುಳ್ಳು. ಆಗಿನಿಂದ ಸದರಿ ಜಾಗವನ್ನು ಅವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸುಳ್ಳು.

ನನ್ನ ತಾಯಿ ದಾನಪತ್ರವನ್ನು ಬರೆದುಕೊಟ್ಟ ದಿನಾಂಕ ನನಗೆ ನೆನಪಿಲ್ಲ. ದಾನಪತ್ರವನ್ನು 1963 ರಲ್ಲಿ ಬರೆದುಕೊಟ್ಟ ನಂತರ ದಾನಪತ್ರವನ್ನು ಬರೆದುಕೊಟ್ಟವರಿಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾನಪತ್ರವನ್ನು ಬರೆದುಕೊಟ್ಟ ಆಸ್ತಿಯ ಪೂರ್ವಕ್ಕೆ ಈರಪ್ಪ, ಪಶ್ಚಿಮಕ್ಕೆ ನಿಂಗಪ್ಪ, ಉತ್ತರಕ್ಕೆ ರಾಜಪ್ಪ, ದಕ್ಷಿಣಕ್ಕೆ ಬೋರಯ್ಯನ ಆಸ್ತಿ ಇದೆ. 2000 ನೇ ಇಸವಿಯಲ್ಲಿ ಬರೆದುಕೊಟ್ಟ ದಾನಪತ್ರದ ಚೆಕ್‌ಬಂದಿ ನನ್ನ ತಾತನಾದ ಪಾಲಯ್ಯನಿಗೆ ಬಂದ ಆಸ್ತಿಯಲ್ಲ ಎಂದರೆ ಸರಿಯಲ್ಲ. ದಾನಪತ್ರದ ಪ್ರಕಾರ ನಾನು ಮ್ಯುಟೇಶನ್ ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿದ್ದೆ ಎಂದರೆ ಹೌದು. ನಾನು ಪಹಣಿ ಮಾಡಿಸಿಕೊಟ್ಟ ನಂತರ ನನ್ನ ಗಂಡನ ಅಣ್ಣ ಎಸಿ ನ್ಯಾಯಾಲಯದಲ್ಲಿ ಪಹಣಿಯನ್ನು ಪ್ರಶ್ನಿಸಿರುತ್ತಾರೆ ಎಂದರೆ ಹೌದು. ಅಲ್ಲಿ ಪಹಣಿಯನ್ನು ರದ್ದು ಮಾಡಿರುತ್ತಾರೆ ಎಂದರೆ ಸುಳ್ಳು. ನಾವು ಡಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇವೆ ಎಂದರೆ ಹೌದು. ಅಲ್ಲಿ ನಮ ಮೇಲ್ಮನವಿಯನ್ನು ತಿರಸ್ಕರಿಸಲಾಯಿತು ಎಂದರೆ ನನಗೆ ಅದೆಲ್ಲ ಗೊತ್ತಾಗುವುದಿಲ್ಲ.

1963 ರಲ್ಲಿ ಬರೆದುಕೊಟ್ಟ ದಾನಪತ್ರದಲ್ಲಿ ದಾವಾ ಸ್ವತ್ತು ನಂಬರ್ 2 15 ಸೆಂಟ್ಸ ಕಣವನ್ನು ಸಹ ನನ್ನ ಅಜ್ಜಿ ಬರೆದುಕೊಟ್ಟಿದ್ದರು ಎಂದರೆ ಎಲ್ಲ ಸುಳ್ಳು. ಅದರಂತೆ ನನ್ನ ಗಂಡ ಮತ್ತು ಅವರ ಅಣ್ಣ ಅದರಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಅದೆಲ್ಲ ಸುಳ್ಳು. ಸಾಕ್ಷಿ ಮುಂದುವರೆದು ಆ ರೀತಿ ದಾನಪತ್ರ 1963 ರಲ್ಲಿ

ಬರೆದುಕೊಟ್ಟಿಲ್ಲ, ಒಂದು ವೇಳೆ ಬರೆದುಕೊಟ್ಟಿದ್ದರೆ ನನ್ನ ತಾಯಿ ನನಗೆ 2000 ರಲ್ಲಿ ದಾನಪತ್ರವನ್ನು ಬರೆದುಕೊಡಲು ಹೇಗೆ ಸಾಧ್ಯ, ಆದ್ದರಿಂದ ನಮ್ಮ ಅಜ್ಜಿ ಯಾವುದೇ ದಾನಪತ್ರ ಬರೆದುಕೊಟ್ಟಿಲ್ಲ.

2000 ನೇ ಇಸವಿಯಲ್ಲಿ ನನ್ನ ತಾಯಿ ನನಗೆ ಬರೆದುಕೊಡಲು ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. 1963 ರ ದಾನಪತ್ರದನ್ವಯ ನನ್ನ ಗಂಡ ಹಾಗೂ ಆತನ ಅಣ್ಣನ ಹೆಸರಿಗೆ ದಾಖಲಾತಿಗಳು ಇವೆ ಎಂದರೆ ಸುಳ್ಳು. ನನ್ನ ತಾಯಿ, ನನ್ನ ದೊಡ್ಡಮ್ಮ 1963 ರ ದಾನಪತ್ರವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಎಲ್ಲ ಸುಳ್ಳು.

ನನ್ನ ಗಂಡನ ಅಣ್ಣ ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಮೃತಪಟ್ಟು ಈಗ 6 ವರ್ಷ ಆಗಿದೆ, ಅದಕ್ಕೆ ಮೊದಲು ನನ್ನ ಗಂಡನ ಅಣ್ಣ ಮೃತಪಟ್ಟಿರುತ್ತಾರೆ. ನನ್ನ ಗಂಡನ ಅಣ್ಣ ದಾವಾ ಹೂಡಿದ ನಂತರ ಆರೋಗ್ಯ ತಪ್ಪಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ದಿಃ 30.10.2014 ರಂದು ಅವರು ಅವರ ಮಗನಿಗೆ ಸಾಮಾನ್ಯ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಅಣ್ಣನಿಗೆ ರಾಜಣ್ಣ, ಬೋರಣ್ಣ ಎಂಬ ಗಂಡು ಮಕ್ಕಳು ಇರುತ್ತಾರೆ. ಪಾಲಮ್ಮ, ಬೋರಮ್ಮ, ಓಬಮ್ಮ, ಮಾಂತಮ್ಮ, ಲಕ್ಷ್ಮೀ ಅವರುಗಳು ಆತನ ಹೆಣ್ಣು ಮಕ್ಕಳು. ನನ್ನ ಗಂಡನ ಅಣ್ಣನ ಮೊದಲ ಹೆಂಡತಿಯ ಹೆಸರು ಬೋರಮ್ಮ, ಆಕೆಯ ಮಗಳು ಸಣ್ಣ ಓಬಕ್ಕ. ಬೋರಮ್ಮ 3 ತಿಂಗಳ ಮಗುವಿದ್ದಾಗಲೇ ತೀರಿಕೊಂಡಿರುತ್ತಾಳೆ. ಅದಾದ ನಂತರ ವಾದಿ 1(ಎ) ಅವರನ್ನು ಓಬಯ್ಯ ಮದುವೆಯಾಗಿರುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಅರ್ಧ ಭಾಗ ಇದೆ ಮತ್ತು 1 ನೇ ಪ್ರತಿವಾದಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ನನ್ನ ತಾತನ ಭಾಗಕ್ಕೆ ಬಂದ 8.66 ಎಕರೆ ನನಗೆ ಸೇರಿದ್ದು, ದಾನಪತ್ರವನ್ನು 1963 ರಲ್ಲಿ ನನ್ನ ಅಜ್ಜಿ ಬರೆದುಕೊಡದ ಕಾರಣ ವಾದಿಗೆ ಅದರಲ್ಲಿ ಭಾಗ ಬರುವುದಿಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.